# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 33 |
| 2) | ಸದಸ್ಯರ ಹೆಸರು | : | ಶ್ರೀ. ಶಶೀಲ್ ಜಿ. ನಮೋಶಿ |
| 3) | ಉತ್ತರಿಸಬೇಕಾದ ದಿನಾಂಕ: | : | 13.02.2024 |
| 4) | ಉತ್ತರಿಸುವವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು . |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರವು ಕಲ್ಯಾಣ ಕರ್ನಾಟಕ ಭಾಗದ ಜನರ ಬಹುದಿನಗಳ ಬೇಡಿಕೆಯಾದ "ಕಲುಬುರಗಿ ರೈಲ್ವೆ ವಲಯವನ್ನು" ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ; ಸಲ್ಲಿಸಿದ್ದಲ್ಲಿ; ಸದರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆಯೇ; ಸಲ್ಲಿಸಿದಲ್ಲಿ; ಸದರಿ ಪ್ರಸ್ತಾವನೆಯು ಯಾವ ಹಂತದಲ್ಲಿದೆ; | 2013-14ನೇ ಸಾಲಿನ ಕೇಂದ್ರ ರೈಲ್ವೆ ಮುಂಗಡ ಪತ್ರದಲ್ಲಿ ಕಲಬುರಗಿ ರೈಲ್ವೆ ವಿಭಾಗವನ್ನು ರಚಿಸುವುದಾಗಿ ಘೋಷಣೆ ಮಾಡಲಾಗಿದೆ. ಅದರ ಅನುಸಾರ ರಾಜ್ಯ ಸರ್ಕಾರವು 37 ಎಕರೆಗಳ ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಿದೆ. ಆದರೆ, ನಂತರದಲ್ಲಿ ಈ ಯೋಜನೆಯು ಜಾರಿಗೊಂಡಿರುವುದಿಲ್ಲ.<br>ರಾಜ್ಯ ಸರ್ಕಾರವು ದಿನಾಂಕ:26.08.2020ರ ಪತ್ರ ಸಂಖ್ಯೆ: CM/296/GOI/2020ರಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪತ್ರದ ಮೂಲಕ ಈ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸುವಂತೆ ರೈಲ್ವೆ ಮಂತ್ರಾಲಯವನ್ನು ಕೋರಲಾಗಿದೆ.<br>ದಿನಾಂಕ:29.12.2020ರ ಪತ್ರ ಸಂಖ್ಯೆ: 2018/E&R/1920/12ರ ರೈಲ್ವೆ ಸಚಿವರ ಪತ್ರದಲ್ಲಿ ಈ ಯೋಜನೆಯನ್ನು ಆರ್ಥಿಕ ಪರಿಣಾಮಗಳ ದೃಷ್ಟಿಯಿಂದ ಕೈಬಿಡಲಾಗಿದೆ ಎಂದು ತಿಳಿಸಲಾಗಿದೆ. |
| (ಆ) | ಇದುವರಗೂ ಎಷ್ಟು ಬಾರಿ ಕಲುಬುರಗಿ ಜಿಲ್ಲೆ ರೈಲು ನಿಲ್ದಾಣವನ್ನು ರೈಲ್ವೆ ವಲಯವನ್ನಾಗಿ (ರೈಲ್ವೆ ಡಿವಿಷನ್) ಘೋಷಿಸಲು ಕೇಂದ್ರ ರೈಲ್ವೆ ಇಲಾಖೆಗೆ ಪತ್ರ ಬರೆಯಲಾಗಿದೆ; (ವಿವರ ನೀಡುವುದು) | ರಾಜ್ಯ ಸರ್ಕಾರದಿಂದ ದಿನಾಂಕ:26.08.2020ರ ಪತ್ರ ಸಂಖ್ಯೆ: CM/296/GOI/2020ರಲ್ಲಿ ಕೇಂದ್ರ ರೈಲ್ವೆ ಮಂತ್ರಾಲಯಕ್ಕೆ ಪತ್ರ ಬರೆಯಲಾಗಿದೆ. |
| (ಇ) | ಕಲಬುರಗಿ ರೈಲ್ವೆ ಡಿವಿಷನ್ ಸ್ಥಾಪಿಸಲು ಸ್ವಾಧೀನಪಡಿಸಿಕೊಂಡಿರುವ ಭೂಮಿಯ ಪ್ರಮಾಣ ಎಷ್ಟು; ಬಹುನಿರೀಕ್ಷಿತ ಕಲಬುರಗಿ ರೈಲ್ವೆ ಡಿವಿಷನ್ ಯೋಜನೆಯ ವಿಸ್ತೃತ ವರದಿಯ ಸಂಪೂರ್ಣ ವಿವರ ನೀಡುವುದು? | ಕಲಬುರಗಿ ರೈಲ್ವೆ ವಿಭಾಗವನ್ನು ಸ್ಥಾಪಿಸಲು 37 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ರೈಲ್ವೆ ಇಲಾಖೆಯು ಈ ಯೋಜನೆಯ ವಿಸ್ತೃತ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ. |

ಸಂಖ್ಯೆ: ಮೂಅಇ 26 ರಾರಾಹೆ 2024/ಇ

**(ಎಂ.ಬಿ.ಪಾಟೀಲ)**
ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.